**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**<u>ಎಸ್.ಸಿ ಸಂಖ್ಯೆಃ 60/2024</u>**

ಪ್ರಾಸಾಃ 14
ಚಾಸಾಃ 21

ಸಾಕ್ಷಿದಾರರ ಹೆಸರು: ಕೆ ಅನೀಫ್

ತಂದೆಯ ಹೆಸರು : ದಿವಂಗತ ಖಾದರ್

ವಯಸ್ಸು : 54 ವರ್ಷ

ವೃತ್ತಿ : ವ್ಯಾಪಾರ

ವಾಸ : ಗರಗಂದೂರು ಗ್ರಾಮ

**ಸಾಕ್ಷಿಯನ್ನು ದಿನಾಂಕ 13-08-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1. ಅಂದಾಜು ಮೂರು ವರ್ಷದ ಹಿಂದೆ ನಾನು KA-05-P-0136 ನೊಂದಣಿ ಸಂಖ್ಯೆಯ ಮಾರುತಿ 800 ಕಾರನ್ನು ಖರೀದಿಸಿ ಅದನ್ನು ಸುಮಾರು 1 ವರ್ಷಗಳ ಕಾಲ ಉಪಯೋಗಿಸಿ ಆನಂತರ ಸದರಿ ಕಾರನ್ನು ಚಾಸಾ-22 ರವರಿಗೆ ನೀಡಿ ಅವರ Swift ಕಾರನ್ನು ನಾನು exchange ಮಾಡಿಕೊಂಡಿದ್ದೆ. ಈ ಬಗ್ಗೆ ನಾನು ದಾಖಲಾತಿಗಳನ್ನು ಚಾಸಾ-22 ರವರಿಗೆ ನೀಡಿದ್ದೆ. 2024 ರ ಮೇ ತಿಂಗಳಿನ ಒಂದು ದಿನ ನನ್ನನ್ನು ಹಾಗೂ ಚಾಸಾ-22 ರವರನ್ನು ಕುಶಾಲನಗರದ ವೃತ್ತ ನಿರೀಕ್ಷಕರ ಕಛೇರಿಗೆ ವೃತ್ತ ನಿರೀಕ್ಷಕರು ಬರಲು ಹೇಳಿದ ಕಾರಣ ನಾವು ಹೋಗಿದ್ದು, ಅವರು ಮೇಲೆ ಹೇಳಿದ ನನ್ನ ಕಾರಿನ ಬಗ್ಗೆ ವಿಚಾರಿಸಿದಾಗ ನಾನು ಮೇಲಿನಂತೆ ಹೇಳಿದ್ದೆ. ಚಾಸಾ-22 ರವರು ಸದರಿ ಮೇಲೆ ಹೇಳಿದ ಕಾರನ್ನು ಬ್ರೋಕರ್ ಒಬ್ಬರಿಗೆ ಮಾರಾಟ ಮಾಡಿದ್ದು, ಸದರಿ ಬ್ರೋಕರ್ ಸದರಿ ಕಾರನ್ನು 1

ನೇ ಆರೋಪಿಗೆ ಮಾರಾಟ ಮಾಡಿದ್ದಾಗಿ ತಿಳಿಯಿತು. ಆರೋಪಿತರ ವಿರುದ್ಧ ಯಾವ ಕಾರಣಕ್ಕಾಗಿ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಮತ್ತು ಈ ಪ್ರಕರಣದ ಕುರಿತಾಗಿ ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

2. 1 ನೇ ಆರೋಪಿ ಮನೆ ಕಟ್ಟಲು ಪ್ರಾಸಾ-5 ರವರ ಜಾಗಕ್ಕೆ ಹೋಗುತ್ತಿದ್ದು, ಅಲ್ಲಿ ಪ್ರಾಸಾ-3 ಒಬ್ಬರೆ ಇದ್ದು, ಪ್ರಾಸಾ-3 ಹಾಗೂ 1 ನೇ ಆರೋಪಿ ಪರಸ್ಪರ ಪ್ರೀತಿಸಿದ್ದು, 1 ನೇ ಆರೋಪಿ ಮುಂದುವರೆದು ತಾನು ಪ್ರಾಸಾ-3 ರವರನ್ನು ಮದುವೆಯಾಗುತ್ತೇನೆ ಎಂದು ಹೇಳಿ ಆಕೆಯೊಂದಿಗೆ ಲೈಂಗಿಕ ಸಂಪರ್ಕ ಮಾಡಿ ಆಕೆಯನ್ನು ಗರ್ಭವತಿಯನ್ನಾಗಿ ಮಾಡಿದ್ದು, ದಿಃ 06-03-2024 ರ ಮಧ್ಯರಾತ್ರಿ ಪ್ರಾಸಾ-3 ರವರು ಪ್ರಾಸಾ-13 ರವರು ಕಟ್ಟಿಕೊಟ್ಟ ಚಿಕ್ಕ ಮನೆಯಲ್ಲಿ ಒಂದು ಗಂಡು ಮಗುವಿಗೆ ಜನ್ಮ ನೀಡಿದ್ದು, ಈ ವಿಚಾರವನ್ನು 1 ನೇ ಆರೋಪಿಗೆ ಹೇಳಿದಾಗ 1 ನೇ ಆರೋಪಿ ಕೂಡಲೇ ಪ್ರಾಸಾ-3 ರವರ ಮನೆಗೆ ಹೋಗಿ ಜೀವಂತ ಇದ್ದ ಗಂಡುಮಗುವನ್ನು ತಾನೇ ನೋಡಿಕೊಳ್ಳುತ್ತೇನೆ ಎಂದು ಹೇಳಿ ಪ್ರಾಸಾ-3 ಹಾಗೂ 4 ರವರಿಂದ ಮಗುವನ್ನು ಪಡೆದು ನಾನು ಮಾರಾಟ ಮಾಡಿದ್ದ ಕಾರಿನಲ್ಲಿ ಮನೆಯ ಕಡೆಗೆ ಹೊರಟು ಮಾರ್ಗ ಮಧ್ಯೆ ಶ್ರೀ ದೇವಿ ಎಸ್ಟೇಟ್ ನ ಮುಂಭಾಗದ ಚೆಟ್ಟಳ್ಳಿ ಸುಂಟಿಕೊಪ್ಪ ರಸ್ತೆಯ ಬದಿಯಲ್ಲಿ ಸುಮಾರು ಮಧ್ಯರಾತ್ರಿ ಸುಮಾರು 1.30 ಗಂಟೆಗೆ ಕಾರನ್ನು ನಿಲ್ಲಿಸಿ ಪ್ರಾಸಾ-3 ರವರಿಗೆ ಮದುವೆಯ ಮೊದಲೇ ಗರ್ಭಿಣಿ ಯಾದ ವಿಚಾರ ಸಮಾಜಕ್ಕೆ ಗೊತ್ತಾದರೆ ಸಂಸಾರ ಹಾಳಾಗಬಹುದು ಎಂದು ತೀರ್ಮಾನಿಸಿ ಬಟ್ಟೆಯ ಸಹಾಯದಿಂದ ಮಗುವಿನ

ಬಾಯಿ ಹಾಗೂ ಮೂಗನ್ನು ಮುಚ್ಚಿ ಉಸಿರುಕಟ್ಟಿಸಿ ಕೊಲೆ ಮಾಡಿ ನಂತರ ಆತನ ಮನೆಗೆ ಹೋಗಿ 2 ನೇ ಆರೋಪಿಗೆ ವಿಚಾರ ತಿಳಿಸಿ ಬೆಳಗಿನ ಜಾವ ತನ್ನ ಮನೆಯ ಹತ್ತಿರದ ಗದ್ದೆಯಲ್ಲಿ ಮೃತದೇಹವನ್ನು ಸಾಕ್ಷ್ಯನಾಶ ಮಾಡುವ ಉದ್ದೇಶದಿಂದ ಹೂತು ಹಾಕಿರುತ್ತಾನೆ ಎಂಬ ವಿಚಾರ ನನಗೆ ಪೊಲೀಸರಿಂದ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ಅಂದರೆ " ಈ ನಡುವೆ ದಿಃ 07-03-2024 ರಂದು ಬೆಳಗ್ಗ -------------- ಎಂಬುದಾಗಿ ಕೊಟ್ಟ ಹೇಳಿಕೆ " ಎಂದು ತನಿಖಾಧಿಕಾರಿಯ ಮುಂದೆ ನಾನು ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ-28 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- 1 ಮತ್ತು 2 ನೇ ಆರೋಪಿ ಪರ ಶ್ರೀ. ಬಿ.ಡಿ.ಕೆ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ